ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸ್ಪೆಷಲ್ ಕೇಸ್ ನಂಬ್ರ 124/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಮೃತ್ ಕುಮಾರ್ ಸಿ.ಆರ್. | ಫ್ರಾಸಾಃ 10 |
| ತಂದೆಯ ಹೆಸರು | : | ಚಿನ್ನಯ್ಯ | ಚಾಸಾಃ 70 |
| ಫ್ರಾಯ | : | 60 ವರ್ಷ | **ದಿನಾಂಕಃ 31.03.2023** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸಹಾಯಕ ಅಭಿಯಂತರರು | |
| ವಾಸಸ್ಥಳ | : | ಕಾವೂರು, ಮಂಗಳೂರು. | |

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಮಾರ್ಚ್ 2017 ರಿಂದ ನಾನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಉಪವಿಭಾಗ, ಬಂಟ್ವಾಳದಲ್ಲಿ ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಮ್ಮ ಕಛೇರಿಯ ಎ.ಇ.ಇ. ಇವರು ಬೆಳ್ತಂಗಡಿ ತಾಲೂಕಿನ ಕುವೆಟ್ಟು ಗ್ರಾಮದಲ್ಲಿರುವ ಲೀಲಾವತಿ ಮತ್ತು ಗೋವಿಂದ ನಾಯ್ಕ್ ಇವರ ಮನೆಯ ಅಂದಾಜುಪಟ್ಟಿಗಳನ್ನು ತಯಾರಿಸಿಕೊಡುವಂತೆ ಮೌಖಿಕವಾಗಿ ನನಗೆ ತಿಳಿಸಿದ್ದರು.

3. ದಿನಾಂಕ 28.06.2017 ರಂದು ನಾನು, ನನ್ನ ಇಬ್ಬರು ಸಹಾಯಕರು ಸೇರಿಕೊಂಡು ಗುರುವಾಯನಕೆರೆಗೆ ಹೋಗಿದ್ದೆವು. ಅಲ್ಲಿ ಎ.ಸಿ.ಬಿ. ಯ ಪೊಲೀಸರು ಬಂದಿದ್ದರು. ಪೊಲೀಸರು ನಮ್ಮನ್ನು ಕುವೆಟ್ಟು ಗ್ರಾಮದಲ್ಲಿರುವ ಲೀಲಾವತಿ ಇವಳ ಮನೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಲೀಲಾವತಿಯ ನೆಲಮಹಡಿ ಮತ್ತು

ಮೊದಲನೇ ಮಹಡಿ ಇರುವ ಒಂದು ಹಳೆಯ ಮನೆ ಇತ್ತು. ಅದೇ ರೀತಿ ಅಲ್ಲಿ ಹೊಸ ನೆಲಮಹಡಿ ಮತ್ತು ಮೊದಲನೇ ಮಹಡಿ ಇರುವ ಒಂದು ಮನೆ, ಅದಕ್ಕೆ ಹೊಂದಿ ಇರುವಂತಹ 3 ಮಳಿಗೆಗಳು ಇದ್ದವು. ಈ ಕಟ್ಟಡಗಳಿಗೆ ಕಂಪೌಂಡ್ ಕಟ್ಟಡ ಇತ್ತು. ಅದು ಹಳೆಯ ಕಟ್ಟಡ ಇತ್ತು. ಕಂಪೌಂಡ್ ಗೆ ಇಂಟರ್ ಲಾಕಿಂಗ್ ಅಳವಡಿಸಲಾಗಿತ್ತು. ಇವುಗಳನ್ನು ನಾನು ನೋಡಿದ್ದೇನೆ. ಆ ಕಟ್ಟಡಗಳ ಅಳತೆಯನ್ನು ನಾನು ಪಡೆದುಕೊಂಡಿದ್ದೇನೆ.

4. ಆ ನಂತರ ನಾನು ನಮ್ಮ ಕಛೇರಿಗೆ ಬಂದು ಪ್ರತೀಯೊಂದು ಕಟ್ಟಡದ ಅಂದಾಜುಪಟ್ಟಿಗಳನ್ನು ತಯಾರಿಸಿದ್ದೇನೆ. ಸಾಕ್ಷಿ ತಾನು ತಯಾರಿಸಿದ ಅಂದಾಜುಪಟ್ಟಿಗಳು ನಿಶಾನೆ ಪಿ-75 ರಿಂದ ನಿಶಾನೆ ಪಿ-83 ರಲ್ಲಿ ಇವೆ ಎಂದು ಗುರುತಿಸಿದ್ದಾರೆ. ಸಾಕ್ಷಿ ಅವುಗಳಲ್ಲಿ ಇರುವಂತಹ ತನ್ನ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ನಿಪಿ-75(ಎ) ದಿಂದ ನಿಪಿ-83(ಎ) ಎಂದು ಗುರುತಿಸಲಾಯಿತು.

5. ನಿಪಿ-75 ರಿಂದ ನಿಪಿ-77 ಹಾಗೂ ನಿಪಿ-81 ರಿಂದ ನಿಪಿ-83 ರಲ್ಲಿರುವ ಕಟ್ಟಡಗಳ ಅಂದಾಜು ವೆಚ್ಚವನ್ನು ನಮ್ಮ ಇಲಾಖೆಯ 2015-2016 ರ ಎಸ್.ಆರ್. ದರಗಳನ್ನು ಅಳವಡಿಸಿಕೊಂಡು ತಯಾರಿಸಿರುತ್ತೇನೆ. ನಿಪಿ-79 ಮತ್ತು ನಿಪಿ-80 ರಲ್ಲಿರುವ ಕಟ್ಟಡಗಳ ಅಂದಾಜು ವೆಚ್ಚವನ್ನು 2009-2010 ರ ನಮ್ಮ ಇಲಾಖೆಯ ಎಸ್.ಆರ್. ದರಗಳನ್ನು ಅಳವಡಿಸಿಕೊಂಡು ತಯಾರಿಸಿರುತ್ತೇನೆ. ಅದೇ ರೀತಿ ನಿಪಿ-78 ರಲ್ಲಿರುವ ಕಟ್ಟಡದ ಅಂದಾಜು ವೆಚ್ಚವನ್ನು 2006-2007 ರ ನಮ್ಮ ಇಲಾಖೆಯ ಎಸ್.ಆರ್. ದರಗಳನ್ನು ಅಳವಡಿಸಿಕೊಂಡು ತಯಾರಿಸಿರುತ್ತೇನೆ.

6. ನಾನು ಅಂದಾಜು ಪಟ್ಟಿಗಳನ್ನು ಕಟ್ಟಡದ ಅಳತೆಯ ಆಧಾರದ ಮೇಲೆ ತಯಾರಿಸಿರುತ್ತೇನೆ. ಎ.ಸಿ.ಬಿ. ಅಧಿಕಾರಿಗಳು ನನಗೆ ನಿಪಿ-75 ರಿಂದ ನಿಪಿ-77 ರಲ್ಲಿರುವ ಹಾಗೂ ನಿಪಿ-81 ರಿಂದ ನಿಪಿ-83 ರಲ್ಲಿರುವ ಕಟ್ಟಡಗಳನ್ನು 2015-2016 ರಲ್ಲಿರುವ ಕಟ್ಟಿಸಲಾಗಿದೆ ಎಂಬ ಮಾಹಿತಿಯನ್ನು ಲಿಖಿತ ಪತ್ರದ ಮೂಲಕ ನೀಡಿದ್ದಾರೆ ಅದೇ ರೀತ ನಿಪಿ-79 ಮತ್ತು ನಿಪಿ-80 ರಲ್ಲಿರುವ ಕಟ್ಟಡಗಳನ್ನು 2009-2010 ರಲ್ಲಿ ಕಟ್ಟಿಸಲಾಗಿದೆ ಮತ್ತು ನಿಪಿ-78 ರಲ್ಲಿರುವ ಕಟ್ಟಡವನ್ನು 2006-2007 ರಲ್ಲಿ ಕಟ್ಟಿಸಲಾಗಿದೆ ಎಂದು ಎ.ಸಿ.ಬಿ. ಅಧಿಕಾರಿಗಳು ಪತ್ರದ ಮೂಲಕ ತಿಳಿಸಿದ್ದರು

7. ನನ್ನ ಅಂದಾಜಿನ ಪ್ರಕಾರ 1) ನಿಪಿ-75 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.9,60,000/-, 2) ನಿಪಿ-76 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.6,00,000/-, 3) ನಿಪಿ-77 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.10,90,000/-, 4) ನಿಪಿ-78 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.10,63,800/-, 5) ನಿಪಿ-79 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.7,00,000/-, 6) ನಿಪಿ-80 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.4,94,790/-, 7) ನಿಪಿ-81 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.2,44,473/-, 8) ನಿಪಿ-82 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.42,181/- ಮತ್ತು 9) ನಿಪಿ-83 ರಲ್ಲಿರುವ ಕಟ್ಟಡ ಕಟ್ಟಿಸಲು ರೂ.1,04,962/- ಖರ್ಚು ಆಗಿದೆ.

8. ನಾನು ಸ್ಥಳ ಪರಿಶೀಲನೆಗೆ ಹೋದಾಗ ಪೊಲೀಸರು ಮಹಜರು ಮಾಡಿದ್ದಾರೆ. ಆ ಮಹಜರು ಮೇಲೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಗುರುತಿಸಿದ ಮಹಜರು ನಿಶಾನೆ ಪಿ-74 ರಲ್ಲಿ ಇದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-74(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ

ಆರೋಪಿತರು ನಾನು ಸ್ಥಳ ಪರಿಶೀಲನೆಗೆ ಹೋದಾಗ ಹಾಜರಿದ್ದರು. ನಾನು ನನ್ನ ಅಂದಾಜುಪಟ್ಟಿಗಳನ್ನು ತಯಾರಿಸಿ ನನ್ನ ಕಛೇರಿಯ ಎ.ಇ.ಇ. ಇವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿ ತಾನು ಸಲ್ಲಿಸಿದ ವರದಿಯನ್ನು ಗುರುತಿಸಿದ್ದು, ಆ ವರದಿಯನ್ನು ನಿಶಾನೆ ಪಿ-86 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-86(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

(ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳುತ್ತಾರೆ. ಸಾಕ್ಷಿ ಸರಕಾರಿ ನೌಕರನು ಇದ್ದು, ಸರಕಾರಿ ಕೆಲಸ ಬಿಟ್ಟು ಸಾಕ್ಷಿ ಹೇಳಲು ಬಂದಿದ್ದರಿಂದ ಸಾಕ್ಷಿಗೆ ಆರೋಪಿತರು ರೂ.2,000/- ಭತ್ಯೆ ನೀಡುವಂತೆ ನಿರ್ದೇಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಗಿದೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.